# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರೇಕೆರೂರ.

ಉಪಸ್ಥಿತರುಃ- **ಶ್ರೀ ವೈ. ಕೆ. ಬೇನಾಳ,** ಬಿ.ಎ., ಎಲ್.ಎಲ್.ಬಿ., (ಆನರ್ಸ),
**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಹಿರೇಕೆರೂರ.**

**ದಿನಾಂಕ 07 ನೇ ಡಿಸೆಂಬರ್ 2022**

**ಎಫ್.ಡಿ.ಪಿ. ಸಂಖ್ಯೆಃ 4/2017**

**ಅರ್ಜಿದಾರಃ-**

ವೀರನಗೌಡ.

**ವಿರುದ್ಧ**

**ಎದುರುದಾರರುಃ-**

1) ಶ್ರೀಮತಿ ರುದ್ರವ್ವ ಹಾಗೂ ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-6**

**ಅರ್ಜಿದಾರಃ-**

ವೀರನಗೌಡ ದ/ತಂದೆ ಚನಬಸನಗೌಡ ಪಾಟೀಲ,
ವಃ 57 ವರ್ಷ, ಉಃ ಕೃಷಿ,
ಸಾಃ ಖಂಡೇಬಾಗೂರ, ತಾಃ ರಟ್ಟೀಹಳ್ಳಿ, ಜಿಃ ಹಾವೇರಿ.

(ಅರ್ಜಿದಾರನ ಪರ ವಕೀಲರು - ಶ್ರೀ ಬಿ.ಎಂ. ಹೊಳೆಯಪ್ಪನವರ)

**ವಿರುದ್ಧ**

**ಎದುರುದಾರರುಃ-**

1) ರುದ್ರವ್ವ ಕೋಂ ಬಸನಗೌಡ ಪಾಟೀಲ,
ವಃ 70 ವರ್ಷ, ಉಃ ಮನೆಕೆಲಸ,
ಸಾಃ ಗುಂಡಗಟ್ಟಿ, ತಾಃ ಹಿರೇಕೆರೂರ, ಜಿಃ ಹಾವೇರಿ.

2) ಭರಮಗೌಡ ತಂದೆ ವೀರನಗೌಡ ಪಾಟೀಲ,
ವಃ 80 ವರ್ಷ, ಉಃ ಕೃಷಿ,
ಸಾಃಯತ್ತಿನಹಳ್ಳಿ ಎಂ.ಎಂ. ತಾಃ ಹಿರೇಕೆರೂರ, ಜಿಃ ಹಾವೇರಿ.

3) ವಿಮಲಾಕ್ಷಿ ಕೋಂ ಶೇಖರಪ್ಪ ಬಣಕಾರ,
ವಃ 62 ವರ್ಷ, ಉಃ ಮನೆಗೆಲಸ,
ಸಾಃ ಮಟ್ಟಿಕೋಟೆ, ತಾಃ ಶಿಕಾರಿಪುರ, ಜಿಃ ಶಿವಮೊಗ್ಗ.

4) ಶಿವನಗೌಡ ಭರಮಗೌಡ ಪಾಟೀಲ,
ವಃ 56 ವರ್ಷ, ಉಃ ಕೃಷಿ,
ಸಾಃಯತ್ತಿನಹಳ್ಳಿ ಎಂ.ಎಂ. ತಾಃ ಹಿರೇಕೆರೂರ, ಜಿಃ ಹಾವೇರಿ.

5) ಶ್ರೀಮತಿ ಲಲಿತಾ ಕೋಂ ಬಾಬು ತಂಬಾಕದ,
ವಃ 54 ವರ್ಷ, ಉಃ ಮನೆಗೆಲಸ,
ಸಾಃ ಬಸವೇಶ್ವರ ನಗರ, ಬ್ಯಾಡಗಿ, ತಾಃ ಬ್ಯಾಡಗಿ, ಜಿಃ ಹಾವೇರಿ.

6) ಓದನಗೌಡ ತಂದೆ ಭರಮಗೌಡ ಪಾಟೀಲ,
ವಃ 48 ವರ್ಷ, ಉಃ ಕೃಷಿ,
ಸಾಃಯತ್ತಿನಹಳ್ಳಿ ಎಂ.ಎಂ. ತಾಃ ಹಿರೇಕೆರೂರ, ಜಿಃ ಹಾವೇರಿ.

7) ದ್ರಾಕ್ಷಾಯಣಿ ಕೋಂ ವೀರನಗೌಡ ಕೆರೂರ,
ವಃ 45 ವರ್ಷ, ಉಃ ಮನೆಗೆಲಸ,
ಸಾಃಶಿರಗಂಬಿ, ತಾಃ ಹಿರೇಕೆರೂರ, ಜಿಃ ಹಾವೇರಿ.

8) ಸುಧಾ ಕೋಂ ಮಹಾಂತೇಶ ಮಾಜಿ,
ವಃ 43 ವರ್ಷ, ಉಃ ಮನೆಗೆಲಸ,
ಸಾಃ ಆಲದಕಟ್ಟಿ, ತಾಃ ರಾಣೆಬೆನ್ನೂರ, ಜಿಃ ಹಾವೇರಿ.

9) ಶ್ರೀಮತಿ ಮಾಲಾ ಕೋಂ ರಾಜು ಹೊಸಮನಿ,
ವಃ 35 ವರ್ಷ, ಉಃ ಮನೆಗೆಲಸ,
ಸಾಃ ಕುರುಬರಗೇರಿ, ರಾಣೆಬೆನ್ನೂರ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

10) ಶಾರದವ್ವ ಕೋಂ ಶಿದ್ದನಗೌಡ ಪಾಟೀಲ,
ವಃ 65 ವರ್ಷ, ಉಃ ಮನೆಗೆಲಸ,
ಸಾಃ ಅಂಗರಗಟ್ಟಿ, ತಾಃ ಹಿರೇಕೆರೂರ, ಜಿಃ ಹಾವೇರಿ.

**(1 ನೇ ಎದುರುದಾರಳ ಪರ ವಕೀಲರು - ಶ್ರೀ ಬಿ.ಎನ್. ಬಣಕಾರ)**
**(2 ರಿಂದ 9 ನೇ ಎದುರುದಾರರ ಪರ ವಕೀಲರು - ಶ್ರೀ ಬಿ.ಜಿ. ಪಾಟೀಲ)**
**(10 ನೇ ಎದುರುದಾರಳ ಪರ ವಕೀಲರು - ಶ್ರೀ ಬಿ.ಎನ್. ಚಲಗೇರಿ)**

## ಮಧ್ಯಂತರ ಅರ್ಜಿ ಸಂಖ್ಯೆ-6 ರ ಮೇಲೆ ಆದೇಶ

ಅರ್ಜಿದಾರ ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 20 ನಿಯಮ 18(2) ಹಾಗೂ ಸಹವಾಚಕ ಕಲಂ 152 ರ ಅಡಿಯಲ್ಲಿ ಸಲ್ಲಿಸಿ, ಹಿರಿಯ ದಿವಾಣಿ ನ್ಯಾಯಾಧೀಶರು ರಾಣೆಬೆನ್ನೂರು ಇವರು ಮೂ.ದಾ.ಸಂಃ 28/1996 ಹಾಗೂ ಮೂ.ದಾ.ಸಂಃ 5/1997 ರಲ್ಲಿ ದಿನಾಂಕ 15-04-2004 ರಂದು ಮಾಡಿರುವ ಪ್ರಾಥಮಿಕ ಡಿಕ್ರಿಯಲ್ಲಿ ತಿದ್ದುಪಡಿ ಮಾಡಿ ಮಾನ್ಯ ಸರ್ವೋಚ್ಚ ನ್ಯಾಯಾಲಯದವರು ವಿನೀತ ಶರ್ಮಾ ವಿರುದ್ದ ರಾಕೇಶ ಶರ್ಮಾ ಪ್ರಕರಣದಲ್ಲಿ ನಿರ್ಣಯಿಸಿದ ಪ್ರಕಾರ ಅರ್ಜಿದಾರನಿಗೆ ¼ ಹಿಸ್ಸೆ ಹಾಗೂ ಎದುದಾರರಾದ ರುದ್ರವ್ವ, ಮಹದೇವಕ್ಕ ಹಾಗೂ ಶಾರದವ್ವ ಪ್ರತಿಯೊಬ್ಬರಿಗೆ ¼ ಹಿಸ್ಸೆಯನ್ನು

ನಿಖರವಾಗಿ ನಿರ್ಣಯಿಸಿ ತಿದ್ದುಪಡಿ ಮಾಡಲು ಪ್ರಾಥಮಿಕ ಡಿಕ್ರಿ ಮಾಡಬೇಕೆಂದು ಕೋರಿರುತ್ತಾನೆ.

2. ಅರ್ಜಿದಾರನು ಈ ಮಧ್ಯಂತರ ಅರ್ಜಿಯನ್ನು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

3. ಎದುರುದಾರರು ಈ ಮಧ್ಯಂತರ ಅರ್ಜಿಗೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

4. ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರನು ಈ ಮಧ್ಯಂತರ ಅರ್ಜಿ ಸಂಃ6 ರಲ್ಲಿ ಕೋರಿರುವಂತೆ ಡಿಕ್ರಿ ಮಾರ್ಪಾಡು ಮಾಡಲು ಇರುವಂತಹ ಕಾರಣಗಳನ್ನು ತೋರಿಸಿದ್ದಾನೆಯೇ?

ಅಂಶ- 2- ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕಾರಾತ್ಮಕವಾಗಿ ಮತ್ತು

ಅಂಶ-2 - ಅಂತಿಮ ಆದೇಶದಂತೆಃ

## ಕಾರಣಗಳು

7. **ಅಂಶ-1:-** ಅರ್ಜಿದಾರನು ತನ್ನ ಮುಖ್ಯ ಅರ್ಜಿಯಲ್ಲಿ, ಅರ್ಜಿದಾರನು ಮೂಲ ದಾವೆ ಸಂ.5/1997 ರಲ್ಲಿ ವಾದಿಯಿದ್ದು, ಹಾಗೂ ಮೂಲ ದಾವೆ ಸಂಃ 28/1996 ರಲ್ಲಿ ಪ್ರತಿವಾದಿಯಿದ್ದು, ಹಾಗೂ ಮೂಲ ದಾವೆ ಸಂಃ 5/1997 ರಲ್ಲಿ ಮುರುಡವ್ವ ಕೋಂ ಚನಬಸವನಗೌಡ ಪಾಟೀಲು ಇವಳು 1 ನೇ ಪ್ರತಿವಾದಿಯಿದ್ದು, ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಚಾಲ್ತಿಯಲ್ಲಿದ್ದಾಗ ಅವಳು ಮೃತ ಪಟ್ಟಿರುತ್ತಾಳೆ. ಅವಳಿಗೆ ಅರ್ಜಿದಾರ ಹಾಗೂ ಅವಳ ಮಕ್ಕಳಾದ ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ವಾರಸುದಾರರು ಇದ್ದು. ಅವರಲ್ಲಿ ಮಹಾದೇವಕ್ಕ ಮರಣ ಹೊಂದಿದ್ದು, ಅವಳ ಗಂಡ ಮತ್ತು ಮಕ್ಕಳಾದ 2 ರಿಂದ 9 ನೇ ಎದುರುದಾರರು ಮತ್ತು ಈ ಅರ್ಜಿದಾರರನ್ನು ಹೊರತು ಪಡಿಸಿ ಬೇರೆ ವಾರಸುದಾರರು ಇರುವುದಿಲ್ಲ. ಮೃತ ಮುರಡವ್ವ ಇವಳು ರಾಣೇಬೆನ್ನೂರಿನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೂಲ ದಾವೆ ಸಂಃ 28/1996 ರಲ್ಲಿ ಅರ್ಜಿದಾರನನ್ನು 1 ನೇ ಪ್ರತಿವಾದಿಯೆಂದು ಹಾಗೂ ತನ್ನ ಹೆಣ್ಣುಮಕ್ಕಳನ್ನು 2 ರಿಂದ 4 ನೇ ಪ್ರತಿವಾದಿಗಳೆಂದು ಸೇರಿಸಿ ದಾವೆ

ಮಾಡಿದ್ದು, ಈ ಎರಡು ದಾವೆಗಳನ್ನು ರಾಣೆಬೆನ್ನೂರಿನ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಕ್ಲಬ್ ಮಾಡಿ ದಿಃ 15-10-2014 ರಂದು ಈ ಅರ್ಜಿದಾರ ಸಲ್ಲಿಸಿದ ಮೂಲ ದಾವೆ ಸಂಃ 5/1997 ರಲ್ಲಿ ಅರ್ಜಿದಾರನಿಗೆ 6/15 ಹಿಸ್ಸೆದ ಹಕ್ಕು, ಮುರಡವ್ವ ಮಾಡಿದ ಮೂಲ ದಾವೆ ಸಂಃ 28/1996 ನ್ನು ವಜಾ ಮಾಡಿದ್ದು, ದಾವಾಸ್ತಿಗಳಲ್ಲಿ ಮೃತ ಮುರಡವ್ವನಿಗೆ 6/15, ರುದ್ರವ್ವಳಿಗೆ 1/15, ಮಹಾದೇವಕ್ಕ ಇವಳಿಗೆ 1/15 ಮತ್ತು ಶಾರದವ್ವ ಇವಳಿಗೆ 1/5 ಹಿಸ್ಸೆ ಕೊಡಿಸಿದ್ದು, ಮೂಲ ದಾವೆ ಸಂಃ 5/1997 ಮತ್ತು 28/1996 ರಲ್ಲಿ ಮಾಡಿದ ಡಿಕ್ರಿಗಳ ಮೇಲೆ ಮುರುಡವ್ವ ಆರ್ ಎಫ್ ಎ ನಂಃ 1414/2004 ಹಾಗೂ ಆರ್ ಎಫ್ ಎ ನಂಃ1415/2004 ನ್ನು ಸಲ್ಲಿಸಿದ್ದಳು. 3 ನೇ ಪ್ರತಿವಾದಿಯಾದ ಶಾರದವ್ವ ಇವಳು ಆರ್ ಎಫ್ ಎ ನಂಃ 127/2015 ಹಾಗೂ ಆರ್ ಎಫ್ ಎ ನಂಃ 135/2015 ನ್ನು ಸಲ್ಲಿಸಿದ್ದಳು, ಈ ನಾಲ್ಕು ಮೇಲ್ಮನವಿಗಳು ಕ್ಲಬ್ ಆಗಿ ದಿಃ 19-08-2010 ರಂದು ನಾಲ್ಕು ಮೇಲ್ಮನವಿಗಳು ವಜಾ ಆಗಿರುತ್ತವೆ. ಆದ್ದರಿಂದ, ಮೂಲ ದಾವೆ ಸಂಃ 5/1997 ರಲ್ಲಿ ಆದ ಪ್ರಾಥಮಿಕ ಡಿಕ್ರಿಯ ಪ್ರಕಾರ ತನ್ನ ಹಿಸ್ಸೆಯನ್ನು ಪ್ರತ್ಯೇಕಿಸಿ ಕೊಡಬೇಕೆಂದು ಅಂತಿಮ ಡಿಕ್ರಿಗಾಗಿ ಅರ್ಜಿದಾರನು ಕೋರಿರುತ್ತಾನೆ. ಅಲ್ಲದೇ, ಈ ಮಧ್ಯಂತರ ಅರ್ಜಿ ಸಂಃ 6 ನ್ನು ಸಲ್ಲಿಸುವುದರ ಮೂಲಕ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿನೀತ ಶರ್ಮ ವಿರುದ್ಧ ರಾಕೇಶ್ ಶರ್ಮಾ ಮತ್ತು ಇತರರು ಪ್ರಕರಣದಲ್ಲಿ, ನಿರ್ಣಯಿಸಿದ ಪ್ರಕಾರ ಅರ್ಜಿದಾರನಿಗೆ 1/4, ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ಇವರಿಗೆ ತಲಾ ¼ ಹಿಸ್ಸೆಯನ್ನು ನಿಖರವಾಗಿ ನಿರ್ಣಯಿಸಿ ಪ್ರಾಥಮಿಕ ಡಿಕ್ರಿ ಮಾಡಬೇಕೆಂದು ಕೋರಿರುತ್ತಾನೆ ಹಾಗೂ ಎದುರುದಾರರು ಈ

ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿರುವುದಿಲ್ಲ.

8. ಅರ್ಜಿದಾರನು ಈಗ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿನೀತ ಶರ್ಮಾ ವಿರುದ್ಧ ರಾಕೇಶ್ ಶರ್ಮಾ ಮತ್ತು ಇತರರು ಪ್ರಕರಣದಲ್ಲಿ ಹೆಣ್ಣುಮಕ್ಕಳಿಗೆ ಗಂಡು ಮಕ್ಕಳ ಜೊತೆ ಸಮನಾದ ಹಿಸ್ಸೆ ಇದೆ ಎಂದು ತೀರ್ಪು ನೀಡಿದ್ದು ಅದರಂತೆ ತನಗೆ ¼ ಹಿಸ್ಸೆಯಿದ್ದು, ಅದರ ಪ್ರಕಾರ ಡಿಕ್ರಿಯನ್ನು ಮಾರ್ಪಡಿಸಬೇಕೆಂದು ಕೋರಿರುವುದರಿಂದ ಹಾಗೂ ರಾಣೆಬೆನ್ನೂರಿನ ಹಿರಿಯ ದಿವಾಣಿ ನ್ಯಾಯಧೀಶರ ನ್ಯಾಯಾಲಯದಲ್ಲಿ ಅರ್ಜಿದಾರನು ಸಲ್ಲಿಸಿದಂತಹ ಮೂಲ ದಾವೆ ಸಂಃ 5/1997 ನ್ನು ದಿಃ 15-10-2004 ರಂದು ಇತ್ಯರ್ಥಪಡಿಸಿ, ಅರ್ಜಿದಾರನಿಗೆ 6/15 ಹಿಸ್ಸೆ ಇದೆ ಎಂದು ಪ್ರಾಥಮಿಕ ಡಿಕ್ರಿಯನ್ನು ಮಾಡಿರುತ್ತದೆ. ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ, 2020 (3) KCCR 1993 (SC) (Vineeta Sharma Vs. Rakesh Sharma and others) ರಲ್ಲಿನ ತತ್ವದಂತೆ, ದಿನಾಂಕ 09-09-2005 ರಲ್ಲಿ ತಂದೆ ಜೀವಂತ ಇರಲೇಬೇಕೆಂದು ಇರುವುದಿಲ್ಲ, ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ದಾಯಾದಿಗಳಾಗಿ ಸಮನಾದ ಹಿಸ್ಸೆಯ ಹಕ್ಕನ್ನು ಪಿತ್ರಾರ್ಜಿತವಾದ ಆಸ್ತಿಗಳಲ್ಲಿ ಹೊಂದಿರುತ್ತಾರೆ ಎನ್ನುವುದಾಗಿರುವುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸದರಿ ನಿರ್ಧರಿತ ಪ್ರಕರಣದ ತತ್ವದಂತೆ, ಅರ್ಜಿದಾರನು ಹಾಗೂ ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ದಾವಾಸ್ತಿಗಳಲ್ಲಿ ತಲಾ ¼ ಹಿಸ್ಸೆಯ ಹಕ್ಕನ್ನು ಹೊಂದಿರುತ್ತಾರೆ.

ಆದ್ದರಿಂದ, ಮೂಲ ದಾವೆ ಸಂಃ 5/1997 ರಲ್ಲಿ ಅರ್ಜಿದಾರನಿಗೆ 6/15 ಹಿಸ್ಸೆಯ ಹಕ್ಕನ್ನು ಹೊಂದಿರುತ್ತಾನೆಂದು ದಿನಾಂಕ 15-10-2004 ರಂದು ತೀರ್ಪನ್ನು ನೀಡಿ ಪ್ರಾಥಮಿಕ ಡಿಕ್ರಿ ಮಾಡಿರುವುದನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸದರಿ ನಿರ್ಧರಿತ ಪ್ರಕರಣದ ತತ್ವದಂತೆ ಮಾರ್ಪಾಡು ಮಾಡಿ, ಅರ್ಜಿದಾರನು ಹಾಗೂ ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ತಲಾ 1/4 ಹಿಸ್ಸೆಯ ಹಕ್ಕನ್ನು ಹೊಂದಿರುತ್ತಾರೆಂದು, ಅದರಂತೆ, ಇನ್ನೊಂದು ಪ್ರಾಥಮಿಕ ಡಿಕ್ರಿಯನ್ನು ಡ್ರಾಗೊಳಿಸುವುದು ಕಾನೂನು ಹಾಗೂ ನ್ಯಾಯದ ಹಿತದೃಷಿಯಿಂದ ಅವಶ್ಯವಾಗಿರುತ್ತದೆ. ಆದ್ದರಿಂದ, ಅರ್ಜಿದಾರನು ಮತ್ತು ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ಇವರಿಗೆ ದಾವಾಸ್ತಿಗಳಲ್ಲಿ ತಲಾ 1/4 ಹಿಸ್ಸೆಯ ಹಕ್ಕನ್ನು ಹೊಂದಿರುವುದರಿಂದ, ಅರ್ಜಿದಾರನು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಮೂಲ ದಾವೆ ಸಂಃ 5/1997 ರಲ್ಲಿನ ಅರ್ಜಿದಾರನು ಮತ್ತು ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ತಲಾ 1/4 ಹಿಸ್ಸೆಯನ್ನು ಪಡೆಯಲು ಅರ್ಹರೆಂದು, ಅದರಂತೆ, ಇನ್ನೊಂದು ಪ್ರಾಥಮಿಕ ಡಿಕ್ರಿಯನ್ನು ಡ್ರಾಗೊಳಿಸಲು ಇರುವಂತಹ ಕಾರಣಗಳನ್ನು ತೋರಿಸಿರುವುದರಿಂದ ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

9. **ಅಂಶ-2:–** ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

## ಆದೇಶ

ಅರ್ಜಿದಾರನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 20 ನಿಯಮ 18(2) ಹಾಗೂ ಸಹವಾಚಕ ಕಲಂ 152ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 6 ನ್ನು ಪುರಸ್ಕರಿಸಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ ವಿನೀತ ಶರ್ಮಾ ವಿರುದ್ದ ರಾಕೇಶ್ ಶರ್ಮಾ ಮತ್ತು ಇತರರು ಪ್ರಕರಣದಲ್ಲಿನ ತತ್ವದ ಪ್ರಕಾರ, ಮೂಲ ದಾವೆ ಸಂಃ 5/1997ರಲ್ಲಿ ವಾದಿ/ಅರ್ಜಿದಾರ ಮತ್ತು ರುದ್ರವ್ವ, ಮಹಾದೇವಕ್ಕ ಮತ್ತು ಶಾರದವ್ವ ತಲಾ 1/4 ಹಿಸ್ಸೆಯ ಹಕ್ಕನ್ನು ಹೊಂದಿರುತ್ತಾರೆಂದು ಆದೇಶಿಸಿದೆ.

ಮೇಲ್ಕಡಂತೆ, ಇನ್ನೊಂದು ಪ್ರಾಥಮಿಕ ಡಿಕ್ರಿಯನ್ನು ಬರೆಯಬೇಕೆಂದು ಈ ಮೂಲಕ ಕಚೇರಿಗೆ ನಿರ್ದೇಶಿಸಿ ಆದೇಶಿದೆ.

**(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 07ನೇ ಡಿಸೆಂಬರ್ 2022 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

ಸಹಿ/-

**(ವೈ. ಕೆ. ಬೇನಾಳ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹಿರೇಕೆರೂರ.